ಬೆಂಗಳೂರಿನಲ್ಲಿ ಮನೆಗಳನ್ನು ಕಳೆದು ಕೊಂಡವರಿಗೆ ಪುನರ್ವಸತಿ

295 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ವಿವಿಧ ಸ್ಥಳಗಳಿಂದ ಸುಮಾರು ವರ್ಷಗಳ ಹಿಂದೆಯೇ ಮನೆಗಳನ್ನು ಕಳೆದುಕೊಂಡು ಬೀದಿಪಾಲಾದ ಸುಮಾರು 10058 ಬಡ ಕೊಳಚೆ ನಿವಾಸಿಗಳಿಗೆ "ಪುನರ್ವಸತಿ ಯೋಜನೆಯಡಿ 20x30 ಅಳತೆಯ ನಿವೇಶನಗಳನ್ನು ವಿತರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೈಗೊಂಡಿದೆಯೇ?

ಆ) ನಿರ್ವಸಿತ ಕೊಳಚೆ ನಿವಾಸಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳು ಈಗಾಗಲೇ 8 ಆದೇಶಗಳನ್ನು ಹೊರಡಿಸಿರುವುದು ನಿಜವಲ್ಲವೆ? ವಿವರಗಳನ್ನು ಆವರಣದಲ್ಲಿ ಒದಗಿಸಲಾಗಿದೆ.

1) ಸಿಎಂ 141 ಎಂಐಎನ್ (2) ಸಿಎಂ 2139 ಎಂಐಎನ್ 93 (3) ಸಿಎಂ 2239 ಎಂಐಎನ್ 93 (4) ಸಿಎಂ 2453 ಎಂಐಎನ್ 93 (5) ಸಿಎಂ 2512 ಎಂಐಎನ್ 93 (6) ಸಿಎಂ 2534 ಎಂಐಎನ್ 93 (7) ಸಿಎಂ 2874 ಎಂಐಎನ್ 93 (8) ಸಿಎಂ 2916 ಎಂಐಎನ್ 93.

ಇ) ಈ ಕಡು ಬಡವರಿಗೆ ಪುನರ್ವಸತಿಯನ್ನು ಒದಗಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಯವರು ಅನೇಕ ಭಾರಿ ಆರೆ ಸರ್ಕಾರಿ ಪತ್ರಗಳನ್ನು ಬರೆದಿರುವುದು ನಿಜವೇ?

ಈ) ಬಿಡಿಎ ಉನ್ನತ ಅಧಿಕಾರಿಗಳವರ ಸಭೆಯಲ್ಲಿ ದಿನಾಂಕ 29.9.1993ರಂದು ಈ ಬಡವರಿಗೆ ನಿವೇಶನಗಳನ್ನು ಹಂಚಲು ಸೂಕ್ತ ನಿರ್ಣಯಗಳನ್ನು ಅನುಕಂಪದಿಂದ ಅಂಗೀಕರಿಸಿರುವುದು ನಿಜವಲ್ಲವೇ?

ಉ) ನಿರ್ವಸಿತ ಅರ್ಜಿದಾರ ಪಟ್ಟಿಯು ಬಿ.ಡಿ.ಎ.ಗೆ ತಲುಪಿದೆಯೇ ಹಾಗೂ ಬಾಕಿ ಇದ್ದಲ್ಲಿ ಉಳಿದ ಪಟ್ಟಿಯನ್ನು ಎಂದು ಪಡೆಯಲಾಗುವುದು.

ಊ) ಸಮಿತಿಯವರು ಸಲ್ಲಿಸಿರುವ ಅನೇಕ ದಾಖಲಾತಿಗಳನ್ನು ತಾರೀಖು 26.10.93 ರಂದೇ ಬಿಡಿಎ ಆಯುಕ್ತರಿಗೆ ಇವು ನೇರವಾಗಿ ಸೇರಿವೆಯೇ?

ಋ) ಆ ನಿರ್ವಸಿತರ ಪರವಾಗಿ ಕರ್ನಾಟಕ ದಲಿತ ಕ್ರಿಯಾಸಮಿತಿಯ ಕೇಂದ್ರ ಕಛೇರಿಯ ಸಂಚಾಲಕರು ಸಲ್ಲಿಸಿರುವ 10 ಬೇಡಿಕೆಗಳ ಅನೇಕ ಮನವಿಗಳು ಮತ್ತು ಮೇಲ್ಮನವಿಗಳು ಸಹ ಬಿ.ಡಿ.ಎ.ಗೆ ಬಂದಿವೆಯೇ?

ೠ) ಆ ನಿರ್ವಸಿತರಾದ ಪರಿಶಿಷ್ಟ ಜಾತಿ, ವರ್ಗ ಹಾಗೂ ಸಂಖ್ಯಾತರು ಮತ್ತು ಕಡುಬಡವರಾದ ಇವರುಗಳಿಗೆ 20x30 ಅಳತೆಗಳ ನಿವೇಶನಗಳನ್ನು ಮಾನವೀಯ ದೃಷ್ಟಿಯಿಂದ ವಿತರಿಸಲು ಇನ್ನು ಎಷ್ಟು ಕಾಲಾವಧಿ ಬೇಕು?

ಎ) ಆವರಿಗೆ ಎಂದು ಪುನರ್ವಸತಿಯನ್ನು ಕಲ್ಪಿಸಲಾಗುವುದು?

ಏ) ಮುಖ್ಯಮಂತ್ರಿಗಳು ಈ ಬಗ್ಗೆ ಪುನಃ ಸ್ಪಷ್ಟವಾದ ಆದೇಶ ಹೊರಡಿಸಿ ಖಚಿತ ದಿನಾಂಕವನ್ನು ಕೊಡುವರೇ?

ಐ) ಪುನರ್ವಸತಿ ಕಲ್ಪಿಸುವ ಬಗ್ಗೆ ದಿನಾಂಕ 31.1.1994ರಲ್ಲಿ ಬಿ.ಡಿ.ಎ. ಅಧಿಕಾರಿಗಳು ಮರು ಸಭೆ ಸೇರಿ ಸೂಕ್ತ ನಿರ್ಣಯಗಳನ್ನು ಕೈಗೊಂಡಿದ್ದಾರೆಯೇ?

ಒ) ಹಾಗಿಲ್ಲದಿದ್ದಲ್ಲಿ ನಿರ್ಣಯಗಳನ್ನು ಈ ಕುರಿತು ಎಂದು ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಒದಗಿಸಿರುವ ಮಾಹಿತಿಯ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತಿನಲ್ಲಿ ನಿರ್ಮಿಸಲ್ಪಟ್ಟ ಗುಡಿಸಲುಗಳನ್ನು ನೆಲಸಮ ಮಾಡಿದ್ದರಿಂದ ನಿರ್ವಸತಿದಾರರಾದ 5076 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ ಈವರೆಗೆ ಬಿ.ಡಿ.ಎ. ಸ್ವತ್ತಿನಲ್ಲಿ ಅಕ್ರಮವಾಗಿ ಕಟ್ಟಿಕೊಂಡಿರುವ 15,017 ಕುಟುಂಬಗಳಿಗೆ ಮನೆ:ಗುಡಿಸಲುಗಳನ್ನು ಸಕ್ರಮಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೊಗೊಂಡಿದೆ. ಹಾಗೂ ಫಲಾನುಭವಿಗಳಿಗೆ ನಿವೇಶನಗಳನ್ನು ಸ್ಥಿರೀಕರಿಸಿದೆ ಈ ಪ್ರಕರಣದಲ್ಲಿ ವಿವಿಧ ಬಡಾವಣೆಗಳಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿಕೊಂಡಿರುವವರ ಹಾಗೂ ನೆಲಸಮ ಮಾಡಿದ್ದರಿಂದ ನಿರ್ವಸತಿದಾರರ ಪೂರ್ಣಮಾಹಿತಿಯು ಪ್ರಶ್ನೆಯಲ್ಲಿ ತಿಳಿಸಿರುವಂತೆ ಕಂಡುಬರುವುದಿಲ್ಲ. ಅರ್ಜಿದಾರರು ಪೂರ್ಣಮಾಹಿತಿಗಳನ್ನು ಒದಗಿಸಿಲ್ಲವಾದ್ದರಿಂದ ಸ್ಪಷ್ಟ ಉತ್ತರವನ್ನು ಒದಗಿಸಲಾಗುತ್ತಿಲ್ಲ.

ಆ) ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸುವ 8 ಪತ್ರಗಳು ಪ್ರಾಧಿಕಾರಕ್ಕೆ ಬಂದಿವೆ.

ಇ) ಹೌದು, ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳುವಳಿಕೆಯುಳ್ಳ ಪತ್ರಗಳು ಪ್ರಾಧಿಕಾರಕ್ಕೆ ಬಂದಿದೆ.

ಈ) ದಿನಾಂಕ 29.9.93ರ ಅಧಿಕಾರಿಗಳ ಸಭೆಯಲ್ಲಿ ನೆಲಸಮ ಮಾಡಿದ ಬಗ್ಗೆ ಪೂರ್ಣ ದಾಖಲೆಗಳು ಹಾಗೂ ಸಾಕ್ಷಾಧಾರಗಳನ್ನು ಒದಗಿಸುವ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ನಿರ್ಣಯ ತೆಗೆದುಕೊಳ್ಳಲಾಗಿದೆ.

ಉ) ಈ ಬಗ್ಗೆ ನಿರ್ವಸಿತರ ಪಟ್ಟಿಯನ್ನು ಸಲ್ಲಿಸಿದ್ದರೂ ಗುಡಿಸಲು ನೆಲಸಮ ಮಾಡಿದ್ದರಿಂದ ನಿರ್ವಸಿತರಾದರೆಂದು ಹೇಳಲು ಪುರಾವೆ ದಾಖಲೆ ಹಾಗೂ ಸಾಕ್ಷಾಧಾರಗಳನ್ನು ಹೊಂದಿರುವ ಅರ್ಹತಾ ಪಟ್ಟಿಯನ್ನು ಪ್ರಾಧಿಕಾರಕ್ಕೆ ಒದಗಿಸಿರುವುದಿಲ್ಲ. ಅದನ್ನು ಒದಗಿಸಿದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಹೌದು.

ಋ) ಹೌದು

ಋೂ) ಅನಧಿಕೃತವಾಗಿ ನೆಲೆಸಿದ್ದರೆನ್ನಲಾದ ಗುಡಿಸಲಾದ ಗುಡಿಸಲುಗಳನ್ನು ನೆಲೆಸಮ ಮಾಡಿದ್ದರ ಬಗ್ಗೆ ಪೂರ್ಣವಾದ ಪುರಾವೆ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲದಿರುವುದರಿಂದ ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂತಿಷ್ಟೇ ಕಾಲಾವಧಿಯಲ್ಲಿ ವಿತರಿಸಲಾಗುವುದೆಂದು ಹೇಳಲು ಸಾಧ್ಯವಾಗುತ್ತಿಲ್ಲ.

ಎ) ಮತ್ತು ಏ) ಸಂಬಂಧಪಟ್ಟವರು, ಗುಡಿಸಲುಗಳನ್ನು ನೆಲಸಮ ಮಾಡಿರುವ ಬಗ್ಗೆ ಪುರಾವೆ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿದ ನಂತರ ಈ ಬಗ್ಗೆ ಜರೂರು ಕ್ರಮ ಕೈಗೊಳ್ಳಲಾಗುವುದು. ಆದರೆ ಇಂತಿಷ್ಟೇ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಐ) ಹೌದು, ಬಿ.ಡಿ.ಎ. ಅಧಿಕಾರಿಗಳು ದಿನಾಂಕ 31.1.94ರಂದು ಮರು ಸಭೆ ಸೇರಿ ದಿನಾಂಕ 29.9.93ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಮರು ಪರಿಶೀಲಿಸಿದ್ದಾರೆ.

ಒ) ಮೇಲೆ ಹೇಳಿದ ವಿವರಗಳನ್ನು ಒದಗಿಸಿದಲ್ಲಿ ಈ ಬಗ್ಗೆ ಆದಷ್ಟು ಜಾಗ್ರತೆ ನಿರ್ಧಾರ ತೆಗೆದುಕೊಳ್ಳಲಾಗುವುದು.